ದಿನಾಂಕ:19.02.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಹೆಚ್ ಕೆ ಆರ್ ವಕೀಲರಿಂದಃ</u>

ಅಪಘಾತವು ದಿ 24.08.2021 ರಲ್ಲಿ ಆಗಿರುತ್ತದೆ. ನಾನು ಬೆಂಗಳೂರು ಕಡೆಯಿಂದ ಬೈರಾಪಟ್ಟಣಕ್ಕೆ ಹೋಗುತ್ತಿದ್ದೆ. ಅಪಘಾತ ಸ್ಥಳ ಬೆಂಗಳೂರು ಮೈಸೂರು ಹೆದ್ದಾರಿ ಎಂದರೇ ಹೌದು. ಅಪಘಾತವು ಬೆಳಿಗ್ಗೆ 7.45 ರಿಂದ 8.00 ಅವಧಿಯಲ್ಲಿ ಆಗಿರುತ್ತದೆ. ಅಪಘಾತವಾದ ಸಮಯದಲ್ಲಿ ಆ ರಸ್ತೆಯಲ್ಲಿ ವಾಹನಗಳು ತುಂಬಾ ಓಡಾಡುತ್ತಿದ್ದವು ಎಂದರೇ ಹೌದು. ಅಪಘಾತದ ಸಂಬಂದ ಧರಣಿ ಎಂಬುವರರು ದೂರು ನೀಡಿರುತ್ತಾರೆ. ಅಪಘಾತ ವನ್ನು ಅವರು ನೋಡಿರುತ್ತಾರೆ. ಅವರು ಆ ಸಮಯದಲ್ಲಿ ನನ್ನ ಜೊತೆ ಬರುತ್ತಿರಲಿಲ್ಲ. ಎದುರುಗಡೆ ಟೀ ಅಂಗಡಿ ಹತ್ತಿರ ನಿಂತಿದ್ದರು. ಅವರನ್ನು ಕರೆದುಕೊಂಡು ಬಂದು ಸಾಕ್ಷಿ ಹೇಳಿಸಲು ತೊಂದರೆ ಇಲ್ಲ. ಅಪಘಾತವಾದಾಗ ನನ್ನ ಹತ್ತಿರ ಡಿ ಎಲ್ ಇತ್ತು ಆದರೆ ನಾನು ಗಾಡಿ ಓಡಿಸುತ್ತಿರಲಿಲ್ಲ. ನನ್ನ ಸ್ನೇಹಿತ ರಾಜು ಓಡಿಸುತ್ತಿದ್ದ. ಅಪಘಾತವಾದಾಗ ಅವರಿಗೂ ಸಹ ಗಾಯ ಆಗಿದೆ ಎಂದರೇ ಜಾಸ್ತಿಗಾಯ ಆಗಿಲ್ಲ. ಅವರುಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೇ ಹೌದು. ಅಪಘಾತವಾದಾಗ ಅವರು ಚಾಲನೆ ಮಾಡುತ್ತಿರಲ್ಲಿ ಅದ ಕಾರಣ ಅವರಿಗೆ ಗಾಯ ಆಗಿಲ್ಲ ಎಂದರೇ ಸರಿಯಲ್ಲ.

2. ಅಪಘಾತಕ್ಕೆ ಒಳಗಾದ ವಾಹನ ನನಗೆ ಸಂಬಂದ ಪಟ್ಟಿದ್ದು. ಅದಕ್ಕೆ ಸಂಬಂದ ಪಟ್ಟ Insurance ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು ಡಿಎಲ್ ಮತ್ತು Insurance ನ್ನು ಹಾಜರುಪಡಿಸಿಲ್ಲ ಏಕೆ ಎಂದರೆ ಆ ದಿನ ನನ್ನ ಹತ್ತಿರ ಇರಲಿಲ್ಲ ಎಂದರೇ ಸರಿಯಲ್ಲ. ಪೋಲಿಸರ ಜೊತೆ ಸಾಮೀಲಾಗಿ ವಿಮಾ ಪರಿಹಾರ ಪಡೆಯಲು ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಡಿಎಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತವಾದ ನಂತರ ನಾನು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದೆ. ಅಪಘಾತವನ್ನು

ಗೋಡ್ಸ್ ಆಪೇ ಆಟೋ ಪಡಿಸಿರುತ್ತದೆ. ಅಪಘಾತ ಪಡಿಸಿದ ನಂತರ ಆ ವಾಹನ ಅಲ್ಲೆ ಇತ್ತು. ದೂರು ಕೊಡುವಾಗ ಯಾವ ವಾಹನ ಮತ್ತು ಚಾಲಕನ ಹೆಸರನ್ನು ಹೇಳಿದ್ದಾರೆ. ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ಯಾವ ವಾಹನ ಅಪಘಾತ ಪಡಿಸಿದೆ ಎಂದು ವೈದ್ಯರ ಹತ್ತಿರ ಹೇಳಿದ್ದೇನೇ. ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಅಪಘಾತದಿಂದ ಎಡಭಾಗ ಮಂಡಿಯ ಕೆಳಭಾಗ ಕಟ್ಟಾಗಿತ್ತು. ಸರ್ಕಾರಿ ಆಸ್ಪತ್ರೆಯಿಂದ ಬೆಂಗಳೂರಿನ ಎಟ್ರಿಮ್ ಆಸ್ಪತ್ರೆಗೆ ಕೆರದುಕೊಂಡು ಹೋಗಿರುತ್ತಾರೆ. ನನಗೆ ಚಿಕಿತ್ಸೆ ನೀಡಿದ ವೈದ್ಯರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಸಾಕ್ಷಿ ಹೇಳಿಸಲು ತೊಂದರೆ ಇಲ್ಲ. ನನಗೆ ಸರ್ಜರಿ ಮಾಡಿದಾಗ ಮೂಳೆ ಜೋಡಣೆ ಮಾಡಿ ರಾಡನ್ನು ಹಾಕಿದ್ದರೆ. ಆ ರಾಡನ್ನು ಇನ್ನೂ ಸಹ ತೆಗೆಸಿರುವುದಿಲ್ಲ. ರಾಡನ್ನು ತಗೆಯಬೇಕು ಎಂದು ಹೇಳಿದ್ದಾರೆ. ಆದರೆ ಹಣ ಇಲ್ಲ.

3. 6 ತಿಂಗಳ ವರೆಗೆ ವಿಶ್ರಾಂತಿ ಪಡೆಯಬೇಕು ಎಂದು ತಿಳಿಸಿದ್ದು ಅದಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ. ಪ್ರತಿದಿನ ಪಿಜಿಯೋಥೇರಪಿ ಮಾಡಿಸಿಕೊಳ್ಳ ಬೇಕೆಂದು ವೈದ್ಯರು ಹೇಳಿದ್ದಾರೆ. ಆದ್ದರಿಂದ ನಾನು ಬೆಂಗಳೂರಿನಲ್ಲಿ ಮಾಡಿಸಿದ್ದೇನೆ. ಪಿಜಿಯೋಥೇರಪಿ ಮಾಡಿಸಿದ್ದಾರೆಂದು ವೈದ್ಯರ ಚೀಟಿ 3 ರಿಂದ 10 ನ್ನು ಒಟ್ಟಿಗೆ ಬರೆಸಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ತಿಂಗಳಿಗೆ ಹಣವನ್ನು ಪಾವತಿ ಮಾಡಿದ್ದೇನೆ. ಪಿಜಿಯೋಥೇರಪಿ ಮಾಡಿಸಿದ ನಂತರ ವೈದ್ಯರು ನೀಡಿದ ವರದಿಯನ್ನು ಹಾಜರುಪಡಿಸಿಲ್ಲ ಎಂದರೇ ಹೌದು. ಯಾವುದೇ ರೀತಿಯ ಪಿಜಿಯೋಥೇರಪಿ ಮಾಡಿಸಿಲ್ಲದೆ ಇದ್ದರು ದಾಖಲೆಗಳನ್ನು ಸೃಷ್ಟಿ ಮಾಡಿಲ್ಲ ಎಂದರೇ ಸರಿಯಲ್ಲ. ಮುಂಗಡವಾಗಿ ಹಣ ಪಾವತಿ ಮಾಡುವುದಕ್ಕೆ ಮುಂಗಡ ಬಿಲ್ ನ್ನು ಹಾಜರುಪಡಿಸಿದ್ದೇನೆ ಎಂದರೇ ಪ್ರತಿಯೊಂದಕ್ಕೂ ಬಿಲ್ಲನ್ನು ನೀಡಿದ್ದೇನೆ. ಮುಂಗಡವಾಗಿ ನೀಡಿದ ಹಣವನ್ನು ಕಡಿತ ಗೊಳಿಸಿ ಬಿಲ್ಲನ್ನು ನೀಡುತ್ತಿದ್ದರು ಎಂದರೇ ಸರಿಯಲ್ಲ. ಚಿಕಿತ್ತೆ ವೆಚ್ಚ 7 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ.

4. ಅಪಘಾತ ಪೂರ್ವದಲ್ಲಿ ನಾನು impaste ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಸಂಬಂಳದ ಹಣವನ್ನು ನಗದು ರೂಪದಲ್ಲಿ ನನಗೆ ಕೊಡುತ್ತಿದ್ದರು. ನನ್ನ ಕಂಪನಿಯಲ್ಲಿ 7 ಜನ ಕೆಲಸ ಮಾಡುತ್ತಿದ್ದೇವು. ವರಮಾನದ ಬಗ್ಗೆ ಯಾವುದೆ salary slip ಹಾಜರುಪಡಿಸಿಲ್ಲ ಆದರೆ ಕೈಯಲ್ಲಿ ಬರೆದುಕೊಟ್ಟಿರುವುದನ್ನು ಹಾಜರುಪಡಿಸಿದ್ದೇನೆ. ನಮಗೆ ESI ವ್ಯವಸ್ಥೆ ಇರಲಿಲ್ಲ. ನಮ್ಮ ಕಂಪನಿಯ ಹಚ್ ಆರ್ ಮ್ಯಾನೇಜರ್ ನ್ನು ಕರೆದುಕೊಂಡು ಬಂದು ಸಾಕ್ಷಿ ಹೇಳಿಸಲು ತೊಂದರೆ ಇದೆ. ಕಂಪನಿ ಮುಚ್ಚಿರುತ್ತದೆ, ಯಾವುದೇ ದಾಖಲೆ ನೀಡಿದೆ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಕೆಲಸಕ್ಕೆ ಹೋಗಿರುವುದಿಲ್ಲ.

**(**ನ್ಯಾಯಾಲಯದ ಸಮಯದ ಮುಗಿದ ಕಾರಣ ಮುಂದುವರೆದ ಪಾಟೀ ಸವಾಲು ಮಧ್ಯಾಹ್ನಕ್ಕೆ ಮುಂದೂಡಲಾಯಿತು**)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ದಿನಾಂಕ:19.02.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಹೆಚ್ ಕೆ ಆರ್ ವಕೀಲರಿಂದಃ

5. ಇತ್ತೀಚೆಗೆ ಚಿಕಿತ್ಸೆ ಪಡೆದುಕೊಂಡಿರುವ ಸಂಬಂದ ಹಾಗೂ ಈಗಲೂ ತೊಂದರೇ ಇದೆ ಎಂಬುದಕ್ಕೆ ವೈದ್ಯರ ಪ್ರಮಾಣ ಪತ್ರ ನೀಡಿದ್ದಾರ ಎಂದರೇ ಇಲ್ಲ. ಮುಂದುವರೆದ ಚಿಕಿತ್ಸೆಗೆ 70ಸಾವಿರ ಬೇಕು ಎಂದು ತಿಳಿಸಿದ್ದು ವೈದ್ಯರು ಪ್ರಮಾಣ ಪತ್ರ ನೀಡಿದ್ದಾರ ಎಂದರೇ ಇಲ್ಲ.ಅಪಘಾತದಿಂದ ನನಗೆ ಯಾವುದೇ ಆರ್ಥಿಕ ನಷ್ಟ ಆಗಿಲ್ಲ ಎಂದರೇ ಸರಿಯಲ್ಲ. ನಾನು ತಿಳಿಸಿರುವ ವಾಹನ ದಿಂದ ಯಾವುದೇ ಅಪಘಾತ ಆಗಿಲ್ಲ ಎಂದರೇ ಸರಿಯಲ್ಲ, ವಿಮಾ ಪರಿಹಾರವನ್ನು ಪಡೆಯಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೇ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(ಸಾ.ಓ.ಹೇ.ಕೇ.ಸ.ಇ.ಎ.ಒ)**

**(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.**)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**(**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

**(**ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)**

**(**ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. **)**